ಆ ಹಂಗಿನ ಚಿಹ್ನೆಯಿನ್ನೂ ಉಳಿದುಕೊಂಡಿದೆ. ಆದರೆ ತೈಲಬಲದಿಂದ ಓಡುವ ಈ ಮೋಟಾರುಗಳು ತಮ್ಮ ಪೂರ್ವಜನನ್ನು ನಿರ್ದಯವಾಗಿ ಹಿಂತಳ್ಳಿಬಿಟ್ಟವು. ಈ ವಾಹನಕ್ರಾಂತಿಯು ಅಪ್ಪನನ್ನು ಕೆಳಕ್ಕೆ ತಳ್ಳಿ ಸಿಂಹಾಸನವೇರಿದ ರಾಜಕುಮಾರನ ದಂಗೆಗಿಂತ ಏನೂ ಕಡಿಮೆಯಲ್ಲ. ಹಿರಿಯರು ಹೇಳುವುದು ಸರಿ: 'ಮೊದಲು ಬಂದ ಕಿವಿಗಿಂತ ನಂತರ ಬಂದ ಕೊಂಬು ಹೆಚ್ಚು ಚೂಪು.'

ನಾನಾದರೂ ಸ್ಕೂಟರನ್ನು ಬರಮಾಡಿಕೊಳ್ಳುವ ಸಂಭ್ರಮದಲ್ಲಿ ಬಾಲ್ಯಕಾಲದ ಸಖಿಯನ್ನು ಕೊಂಚ ಅಲಕ್ಷಿಸಿದೆನೆಂದು ಕಾಣುತ್ತದೆ. 'ಎಷ್ಟೊಂದು ವರ್ಷ ದುಡಿದಿದೆ. ದಣಿದಿದೆ. ವಿಶ್ರಾಂತಿ ಪಡೆಯಲಿ' ಎಂಬ ಸಹಾನುಭೂತಿಯಿಂದಲೇ ಅದನ್ನೊಯ್ದು ಅಟ್ಟದ ಮೇಲೆ ನಿಲ್ಲಿಸಿದೆ. ಅದು ನಾನುಗೈದ ಹಿಮಾಲಯ ತೂಕದ ಗುನ್ಹೆಯಾಗಿತ್ತು. ಯಾಕೆಂದರೆ ಅದನ್ನು ಅಟ್ಟದಿಂದ ಕೆಳತರಲು ಅವಕಾಶವೇ ಒದಗಲಿಲ್ಲ. ಪ್ರಾಧ್ಯಾಪಕನಾಗಿ ಸೈಕಲ್ ಹೊಡೆಯುವುದು ಕುಟುಂಬಕ್ಕೆ ಮಾತ್ರವಲ್ಲ, ವಿಶ್ವವಿದ್ಯಾಲಯದ ಮರ್ಯಾದೆಗೂ ಉಚಿತವಲ್ಲ ಎಂಬ ಕುಟುಂಬದ ಸಮಸ್ತ ಸದಸ್ಯರ ಅಭಿಮತವೂ ಅದರ ಆರೋಹಣಕ್ಕೆ ಅಡ್ಡಿಯಾಗಿತ್ತು. ಸ್ವಂತ ಗರಿಮೆಯಿಂದ ನಿಂತಿರುವ ಸಂಸ್ಥೆಗಳ ಮರ್ಯಾದೆ, ಅದರ ನೌಕರರ ವಾಹನಗಳಿಂದ ಮುಕ್ಕಾಗುತ್ತದೆಯೇ? ನನಗೀ ತರ್ಕವೇ ಅರ್ಥವಾಗಲಿಲ್ಲ. ಆದರೆ ಬಾನು ಕಡ್ಡಿಮುರಿದಂತೆ ಹೇಳಿದಳು: "ನೋಡು, ಇಲ್ಲೀವರೆಗೂ ಸೈಕಲಲ್ಲಿ ಅಡ್ಡಾಡಿದಿವಿ. ಇಲ್ಲಂತಿಲ್ಲ. ಆದರೆ ಕೈತುಂಬ ಸಂಬಳ ಬರುತ್ತಿರುವಾಗಲೂ ಸೈಕಲ್ ಹೊಡೀತಿದ್ದರೆ ಜನ ಏನಂದಾರು? ನಿನಗೂ ವಯಸ್ಸಾಯಿತು. ಮೊದಲಿನ ಶಕ್ತಿ ಉಳಿದಿಲ್ಲ. ನನಗಾದರೂ ಸೈಕಲ್ ಮೇಲೆ ಕೂರೋಕೆ ಆಗ್ತಿಲ್ಲ. ಅದು ನನ್ನ ಸೀರೇನ ರಸ್ತೇಲಿ ಎಳೆದುಹಾಕಿದ್ದು ನೆನಪಿಸಿಕೊ.'' ಅವಳ ವಾದದಲ್ಲಿ ತಪ್ಪಿರಲಿಲ್ಲ. ಆದರೂ ನನಗೆ ವಯಸ್ಸಾಯಿತು ಎಂಬ ಹೇಳಿಕೆ ಅನಗತ್ಯವಾಗಿತ್ತು. ವಯಸ್ಸಿನ ಕಹಿಸತ್ಯವನ್ನು ವಿಷಕಂಠನಂತೆ ಹೇಗಾದರೂ ನುಂಗಬಲ್ಲೆ. ಆದರೆ 'ಜನ ಏನಂದಾರು?' ಎಂಬುದನ್ನು ಮಾತ್ರ ಒಪ್ಪಲಾರೆ. ಜನಕ್ಕೆ ಹೆದರುವವರು ಏನು ಸಾಧಿಸಿದ್ದಾರೆ? ಲೋಕದ ಮಾತಿಗೆ ತಲೆಕೆಡಿಸಿಕೊಳ್ಳದೆ ಸರಿಯೆನಿಸಿದ್ದನ್ನು ಮಾಡುವವರು ತಾನೇ ನಿಜವಾದ ಸಾಧಕರು? ಗುರುದೇವ ಟ್ಯಾಗೋರರು 'ಎಕಲ ಚಲೋರೆ' ಎಂದಿಲ್ಲವೇ? ಲೋಕಕ್ಕಂಜಿ ಬದುಕುವ ಈ ಜನ ಸಣ್ಣಪುಟ್ಟ ಸ್ವಾತಂತ್ರ್ಯಗಳನ್ನು ಹೊಸಕಿಹಾಕುತ್ತಾರೆ. ಎಷ್ಟೇ ಒತ್ತಡ ಬಂದರೂ ಕಷ್ಟಸುಖದ ಪಾಲುಗಾರನಾಗಿದ್ದ ಸಖನನ್ನು ಮಾರಲು ನಾನು ಒಪ್ಪಲಿಲ್ಲ. ಅದನ್ನು ಮಾರುವುದೂ ಹರಿಶ್ಚಂದ್ರ ತನ್ನನ್ನು ಮಡದಿ – ಮಕ್ಕಳನ್ನು ಮಾರಿಕೊಂಡಿದ್ದೂ ಒಂದೇ. ಚರ್ಚೆಯೆಲ್ಲ ಮುಗಿದ ಬಳಿಕ, ಬಾನು ಅದು ಮನೆಯಲ್ಲಿ ಇನ್ನೂ ಕೆಲಕಾಲ ಇರಬಹುದು ಎಂಬ ಕೋರಿಕೆಯನ್ನು ಮನ್ನಿಸಿದಳು – ಎಲ್ಲವನ್ನೂ ಸೋತ ಸಾಮಂತನು ಒಂದು ಹಳ್ಳಿಯಾದರೂ ಬಿಟ್ಟುಕೊಡಿ ಎಂದು ಬೇಡಿದಾಗ ಉದಾರವಾಗಿ ಸಮ್ಮತಿಸುವ ದೊರೆಯಂತೆ.

ಆದರೆ ದೂಳಾಂಬರಿಯಾಗಿದ್ದ ಸೈಕಲ್ಲು ಮನೆಗೆ ಬಂದವರಿಗೆಲ್ಲ ಕಾಣಿಸಿಕೊಳ್ಳುತ್ತ, ಗಲ್ಲುಗಂಬಕ್ಕೆ ಕಟ್ಟಿಹಾಕಿದ ಅಪರಾಧಿಯಂತೆ ಜೋಲುಮುಖ ಹಾಕಿಕೊಂಡು, ನನ್ನನ್ನು ಮೂಲೆಗುಂಪು ಮಾಡಿದ್ದಾರೆ ಎಂದು ಚಾಡಿ ಹೇಳತೊಡಗಿತು. ಅತಿಥಿಗಳಾದರೂ ತಿಂಡಿತೀರ್ಥ ತೀರಿಸಿದ ಬಳಿಕ 'ಚಂದದ ಮನೆ ಕಟ್ಟಿಸಿದೀರಿ. ಈ ಲಟಾರಿ ಸೈಕಲನ್ಯಾಕೆ ಇಟ್ಟಕೊಂಡೀರಿ?' ಎಂದು ತಿವಿದು ಹೋಗುತ್ತಿದ್ದರು. ನಮ್ಮ ಮನೆಗೆಲಸದ ಯಮುನಮ್ಮ, 'ಸಾರೂ, ಮುದುಕರಿಗೆ ಕೂಳುದಂಡ ಹಳೇಬಟ್ಟೆಗೆ ನೂಲುದಂಡ' ಎಂದು ದೂಳು ಒರೆಸದೆ ನಿರ್ಲಕ್ಷ್ಯ ತೋರಿದಳು.